



ಅದು 'ಕೆಜಿಎಫ್' ಪತ್ರಿಕಾಗೋಷ್ಠಿ.

ಆ ಪತ್ರಿಕಾಗೋಷ್ಠಿಯಲ್ಲಿ ಇದ್ದಿದ್ದು ಬರೀ ಕನ್ನಡದ ಪತ್ರಕರ್ತರಲ್ಲ; ಬೇರೆ ಭಾಷೆ–ರಾಜ್ಯಗಳ ಇನ್ನೂರಕ್ಕೂ ಅಧಿಕ ಪತ್ರಕರ್ತರು ಅಲ್ಲಿದ್ದರು. ಹೀಗೆ ಬೇರೆ ರಾಜ್ಯ–ಭಾಷೆಗಳ ಪತ್ರಕರ್ತರು ಕನ್ನಡ ಸಿನಿಮಾವೊಂದಕ್ಕೆ ಅಷ್ಟು ಪ್ರಮಾಣದಲ್ಲಿ ಸೇರಿದ್ದು ಅದೇ ಮೊದಲು.

ಅಲ್ಲಿ ಪತ್ರಕರ್ತರೊಬ್ಬರು ಕೆಜಿಎಫ್ ಸಿನಿಮಾ ರೂಪುಗೊಳ್ಳಲು ಯಾಕಿಷ್ಟು ಸಮಯ ತೆಗೆದುಕೊಂಡಿತು ಎಂದು ಕೇಳಿದ ಪ್ರಶ್ನೆಗೆ ನಿರ್ದೇಶಕ ಪ್ರಶಾಂತ್ ನೀಲ್ ನಕ್ಕು ಸುಮ್ಮನಾದರು. ಆದರೆ, ನಾಯಕ ಯಶ್ ನೀಡಿದ ಉತ್ತರ ಹಲವು ದಿನಗಳ ಕಾಲ ಫೇಸ್‌ಬುಕ್‌ನಲ್ಲಿಯೂ ವೈರಲ್ ಆಯ್ತು.

ಯಶ್ ಹೇಳಿದ್ದಿಷ್ಟು: 'ಚಿಕ್ಕ ಮನೆಯನ್ನು ಬೇಗ ಕಟ್ಟಬಹುದು. ಆದರೆ ಅರಮನೆ ಕಟ್ಟೋಕೆ ಜಾಸ್ತಿ ಟೈಮ್ ಬೇಕಾಗತ್ತೆ'.

ಪ್ರಸ್ತುತ 'ಕೆಜಿಎಫ್' ಬಿಡುಗಡೆಯಾಗಿ ಇದುವರೆಗೆ ಕನ್ನಡದಲ್ಲಿ ಅತಿಹೆಚ್ಚು ಗಣ ಗಳಿಸಿದ ಸಿನಿಮಾ ಎಂಬ ಅಗ್ಗಳಿಕೆ ಪಡೆದಿದೆ. ಅಷ್ಟೇ ಅಲ್ಲ, ತೆಲಗು, ತಮಿಳು, ಹಿಂದಿ ಭಾಷೆಗಳಲ್ಲಿ ಅದು ಮಾಡಿದ ಸದ್ದೂ ದೊಡ್ಡದೇ. ಕೆಜಿಎಫ್



ಪ್ರಶಾಂತ್ ನೀಲ್

ಅಬ್ಬರ ಮುಗಿದು, ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿ, ಕಿರುತೆರೆಯಲ್ಲಿಯೂ ಪ್ರಸಾರವಾಗಿ, ಪೈರಸಿ ಪ್ರತಿಗಳು ಮೊಬೈಲ್‌ಗಳಲ್ಲಿ ಓಡಾಡುತ್ತಿರುವುದೆಲ್ಲವನ್ನೂ ನಾವು ನೋಡುತ್ತಲೇ ಇದ್ದೇವೆ.

ಮೇಲೆ ಹೇಳಿದ ಉದಾಹರಣೆಗಳಿಗೂ 'ಕೆಜಿಎಫ್' ಸಿನಿಮಾ ಯಶಸ್ಸಿಗೂ ನೇರವಾಗಿ ಏನೂ ಸಂಬಂಧ ಇಲ್ಲದ ಹಾಗೆ ತೋರಬಹುದು. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಈ ಉದಾಹರಣೆಗಳಲ್ಲಿ, ಕನ್ನಡದ ಗಡಿ ದಾಟಿ ರಾಷ್ಟ್ರಮಟ್ಟದಲ್ಲಿ, ಕೆಜಿಎಫ್ ಬಾರಿಸಿದ ಗೆಲುವಿನ ಡಂಗುರದ ಹಿಂದೆ ಎರಡು ದಾರಿಗಳ ಸೂಚನೆಯಿದೆ. ಸಿನಿಮಾದ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರವಹಿಸಿದ್ದ ಆ ಅಂಶಗಳನ್ನು ಸಾಂದ್ರವಾಗಿ ಹೀಗೆ ಹೇಳಬಹುದು;

1. ಸಿನಿಮಾದ ನಿರ್ಮಾಣ ಮತ್ತು ಮಾರುಕಟ್ಟೆ ಯೋಜನೆಯಲ್ಲಿಯೇ, ಭಾಷೆ–ಪ್ರದೇಶಗಳ ಗಡಿ ಅಷ್ಟಾಗಿ ತೊಡಕಾಗದ ಹಾಗೆ ಯೋಚಿಸಿದ್ದು; 'ಸಾಧ್ಯವಾದಷ್ಟೂ ಹೆಚ್ಚು ಜನರಿಗೆ ತಲುಪಿಸುವ' ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದು.

2. ಕನ್ನಡ ಮಾಧ್ಯಮಗಳಷ್ಟೇ ಅಲ್ಲ, ಬೇರೆ ಭಾಷೆಗಳ ಮಾಧ್ಯಮಗಳಿಗೂ (ಸೋಷಿಯಲ್ ಮೀಡಿಯಾ ಒಳಗೊಂಡಂತೆ) 'ನಾವು ಕಟ್ಟಿರುವುದು ಪುಟ್ಟ ಮನೆಯಲ್ಲ; ಅದು ಅರಮನೆ' ಎಂದು ಬಿಂಬಿಸಿದ್ದು.

ಇದರ ಪರಿಣಾಮದ ಬಗ್ಗೆ ಹೆಚ್ಚಿಗೇನೂ ಹೇಳಬೇಕಾಗಿಲ್ಲ. ನಮ್ಮ ಕಣ್ಣಮುಂದೆಯೇ ಕೆಜಿಎಫ್, ಗಣಿಯ ಆಳದಿಂದ ನಭದ ತುದಿಗೆ ಬೆಳೆದುನಿಂತಿದೆ.

'ಕೆಜಿಎಫ್' ಕನ್ನಡ ಚಿತ್ರರಂಗದಲ್ಲಿ ಒಂದು